# ಅಡಕೆ ವೈಜ್ಞಾನಿಕ ಸಂಶೋಧನೆಗೆ ಬೆಂಬಲ




ಮಂಗಳೂರಿನ ಕ್ಯಾಂಪ್ಕೊ ಪ್ರಧಾನ ಕಚೇರಿಯಲ್ಲಿ ಡಾ.ಪ್ರಸನ್ನ ಬೇಲೂರು ಅವರ 'ಅರೇಕಾ ನಟ್-ಹಿಸ್ಟರಿ ಕನ್ ಸ್ಟಿಟ್ಯುಯೆಂಟ್ಸ್, ಕ್ಯಾನ್ಸರ್ ಬಿಯಾಂಡ್' ಪುಸ್ತಕ ಬಿಡುಗಡೆ ಸಮಾರಂಭ ನೆರವೇರಿತು. ಎಸ್.ಆರ್.ಸತೀಶ್ಚಂದ್ರ, ಪ್ರೊ.ರವಿ, ವಿಘ್ನೇಶ್ವರ ವರ್ಮುಡಿ, ಪ್ರಸನ್ನ ಬೇಲೂರು, ಮಹೇಶ್ ಪುಚ್ಚಪ್ಪಾಡಿ, ಡಾ.ಬಿ.ವಿ.ಸತ್ಯನಾರಾಯಣ ಮತ್ತಿತರರು ಇದ್ದರು.

■ ಕ್ಯಾಂಪ್ಕೊ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ ಹೇಳಿಕೆ

ಮಂಗಳೂರು: ಅಡಕೆ ಕುರಿತು ರಚನಾತ್ಮಕ ಸಂಶೋಧನೆ ನಡೆಯಬೇಕು. ಅಡಕೆ ಬೆಳೆ ಕುರಿತು ನಡೆಯುವ ಯಾವುದೇ ರಚನಾತ್ಮಕ, ವೈಜ್ಞಾನಿಕ ಸಂಶೋಧನೆಗಳು ನಡೆದರೆ ಅದಕ್ಕೆ ಕ್ಯಾಂಪ್ಕೊ ಸಂಸ್ಥೆ ಬೆಂಬಲವಾಗಿ ನಿಲ್ಲಲಿದೆ ಎಂದು ಕ್ಯಾಂಪ್ಕೊ ಅಧ್ಯಕ್ಷ ಎಸ್.ಆರ್.ಸತೀಶ್ಚಂದ್ರ ಹೇಳಿದರು.

ಕ್ಯಾಂಪ್ಕೊ ಪ್ರಧಾನ ಕಚೇರಿಯಲ್ಲಿ ಡಾ.ಪ್ರಸನ್ನ ಬೇಲೂರು ಬರೆದು, ಸೆಂಟ್ರಲ್ ಅಡಕೆ ಮತ್ತು ಕೋಕೋ ಮಾರ್ಕೆಟಿಂಗ್ ಆ್ಯಂಡ್ ಪ್ರೊಸೆಸಿಂಗ್ ಕೋ ಆಪರೇಟಿವ್, ವೈಟ್ ಫಾಲ್ಕನ್ ಪಬ್ಲಿಷಿಂಗ್ ಪ್ರಕಟಿಸಿದ 'ಅರೇಕಾ ನಟ್-ಹಿಸ್ಟರಿ ಕನ್ ಸ್ಟಿಟ್ಯುಯೆಂಟ್ಸ್, ಕ್ಯಾನ್ಸರ್ ಬಿಯಾಂಡ್' ಪುಸ್ತಕ ಬಿಡುಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿ ಬುಧವಾರ ಮಾತನಾಡಿದರು.

ಎನ್ಐಟಿಕೆ ನಿರ್ದೇಶಕ ಪ್ರೊ.ರವಿ ಪುಸ್ತಕ ಬಿಡುಗಡೆ ಮಾಡಿದರು. ಸಂಶೋಧಕ ವಿಘ್ನೇಶ್ವರ ವರ್ಮುಡಿ, ಪ್ರಸನ್ನ ಬೇಲೂರು ಮಾತನಾಡಿದರು. ಅಖಿಲ ಭಾರತ ಅಡಕೆ ಬೆಳೆಗಾರರ ಸಂಘದ ಅಧ್ಯಕ್ಷ ಮಹೇಶ್ ಪುಚ್ಚಪ್ಪಾಡಿ ಉಪಸ್ಥಿತರಿದ್ದರು. ಕ್ಯಾಂಪ್ಕೊ ನಿರ್ದೇಶಕ ಡಾ.ಬಿ.ವಿ.ಸತ್ಯನಾರಾಯಣ ಸ್ವಾಗತಿಸಿದರು. ಡಿಜಿಎಂ ಶ್ಯಾಮ್ ವಂದಿಸಿದರು. ಚೀಫ್ ಮ್ಯಾನೇಜರ್ ಜಯ ಭಂಡಾರಿ ನಿರೂಪಿಸಿದರು.

> ಸರ್ಕಾರಕ್ಕೆ ಅಡಕೆ ಬೆಳೆಯಿಂದ ಆದಾಯ, ಉದ್ಯೋಗ ಲಭಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ಯಾಂಕ್‌ಗಳ ಬೆಳವಣಿಗೆ, ಶಿಕ್ಷಣ ಸಂಸ್ಥೆಗಳ ಬೆಳವಣಿಗೆ ಆಗಿದೆ. ಅಡಕೆ ಬೆಳೆಯ ಸಮಸ್ಯೆ ಬಗ್ಗೆ ಬೆಳೆಗಾರರು ಚಿಂತನೆ ಮಾಡಬೇಕು. ಚಿಂತನೆಯ ಯೋಜನೆಗಳನ್ನು ಸರ್ಕಾರಕ್ಕೆ ಮನವರಿಕೆ ಮಾಡಿ ಕೊಡುವ ಕೆಲಸವಾಗಬೇಕು.
>
> I ವಿಘ್ನೇಶ್ವರ ವರ್ಮುಡಿ ಸಂಶೋಧಕ

Vijayavani, Date: 19/02/2026, p. 03